ಕವಿತೆ



## ರಮೇಶ ಅರೋಲಿ

ಕಲೆ: ವಿ.ಎಂ. ಮಂಜುನಾಥ್

# ಎರಡು ಗಝಲ್‌ಗಳು

1 ಕಣ್ಣಿನ ಭಾಷೆ ಕಣ್ಣಿಗಷ್ಟೇ ಅರ್ಥವಾಗುವುದೆಂದು ಕಣ್ಣು ಮುಚ್ಚಿ ಅಂದರು ಯಾರೋ
ಒಲವೊಂದು ಹುಚ್ಚರ ಭಾಷೆ ಅದು ಅವರಿಗಷ್ಟೇ ಅರ್ಥವಾಗುವುದೆಂದರು ಯಾರೋ

ಹೇಗೆ ತಿಳಿಸುವುದು ಇವರಿಗೆ ಕಳೆದುಕೊಂಡಿದ್ದು ನಾವು, ಹುಡುಕುತಿರುವುದು ನಮ್ಮನ್ನೇ!
ಎದೆನೋವು ನೊಂದೆದೆಗಷ್ಟೇ ಅರ್ಥವಾಗುವುದೆಂದು ಎದೆ ಬಡಿದುಕೊಂಡರು ಯಾರೋ

ವಿವರಿಸಲಿ ಹೇಗೆ ಇವರಿಗೆ ಕನವರಿಕೆಯ ಗುಣುಗು ಅವಳು, ನಿದ್ದೆಯಲಿ ನಡಿಗೆ ನಾನು
ಮತ್ತಿನರ್ಥ ಮತ್ತೇರಿದವರಿಗಷ್ಟೇ ಗೊತ್ತಾಗುವುದೆಂದು ಮತ್ತೇರಿ ಅಂದರು ಯಾರೋ

ಮನಗಾಣಿಸಲಿ ಹೇಗೆ ಇವರಿಗೆ ಅಂತರವನು ಸಮ ಹಂಚಿದೆ ವಿಧಿ ನಮ್ಮ ನಮ್ಮ ಪಾಲಿಗೆ
'ಅರೋಲಿ' ಬರೆದವನಷ್ಟೇ ಹಣೆ ಓದಬಹುದೆಂದು ಹಣೆ ಬಡಿದುಕೊಂಡರು ಯಾರೋ

2 ನಾನು ಹಾಸಿಕೊಂಡು ಮಲಗುವುದಕ್ಕೆ ನಿದ್ದೆ ಅನ್ನುತ್ತದೆ ಲೋಕ
ನನ್ನ ಮೇಲೆ ಹೊದಿಸಿ ಮಲಗಿಸುವುದಕ್ಕೆ ಸಾವು ಅನ್ನುತ್ತದೆ ಲೋಕ

ನಿಟ್ಟಿಸಿರು ನೀರು ಪಾಲಾದ ಹೊತ್ತು ನಿನ್ನ ಕಂಗಳಲ್ಲಿ ತಂಗಲು ಬಿಡು
ಕಟ್ಟಕಡೆ ಮಾತೊಂದು ಹೇಳದಿರುವುದಕ್ಕೆ ಹಣೆಬರಹ ಅನ್ನುತ್ತದೆ ಲೋಕ

ರೆಪ್ಪೆ ಮುಚ್ಚಿದವರಿಗೆ ನಮಿಸಿ ನಡೆದರು ಎಲ್ಲಾ ಸಂಜೆ ಅವರವರ ಬಿಡಾರಕೆ
ಇಲ್ಲಿ ಕಣ್ಣೆದುರು ಬಿದ್ದ ನಕ್ಷತ್ರಗಳನ್ನು ತುಳಿದು ನಡಿ ಅನ್ನುತ್ತದೆ ಲೋಕ

ಯಾರಿಗೆ ಹೇಳುವಂತಿದೆ ಹೇಳು, ನಮ್ಮ ಪಾಡು ಬರಿ ನಮ್ಮದಲ್ಲವೆಂದು
ಪಾಲಿನ ಒಂದಿರುಳು ನಿರಾಕರಿಸಲು ಕ್ಷಣ ನೀರುಪಾಲು ಅನ್ನುತ್ತದೆ ಲೋಕ

ಸಖಿ, ಚಲಿಸುವ ನಿನ್ನ ಕಣ್ಣುಗಳನ್ನು ನಿಲ್ಲಿಸು ಇನ್ನಾದರು ಇಲ್ಲಿ ನನ್ನತ್ತ
'ಅರೋಲಿ' ಮುಚ್ಚಿದ ಕಣ್ಣು ಮುತ್ತಿಕ್ಕುವುದಕೆ ದುರಾದೃಷ್ಟ ಅನ್ನುತ್ತದೆ ಲೋಕ!